# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು-560003

# KARNATAKA SCHOOL EXAMINATION AND ASSESSMENT BOARD

Malleshwaram Bengaluru-560003

## 2025–26ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆ ಪತ್ರಿಕೆ

## S.S.L.C MODEL QUESTION PAPER : 2025-26

## ವಿಷಯ :ತೃತೀಯ ಭಾಷೆ ಕನ್ನಡ

ಸಮಯ : 3 ಗಂಟೆ — ವಿಷಯ ಸಂಕೇತ : 62 K

ಗರಿಷ್ಠ ಅಂಕಗಳು : 80 — Subject code: 62 K

---

**ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು**

**1**. ಪ್ರಶ್ನೆ ಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕೆಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನಾರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ**. **8X1=8**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ.

ಎ) 13

ಬಿ) 25

ಸಿ) 24

ಡಿ) 49

2.**“ನಿರಾಂಡಂಬರ”** ಈ ಪದದ ವಿರುದ್ದಾರ್ಥಕ ಪದ

ಎ) ಅಂಬರ

ಬಿ) ಆಡಂಬರ

ಸಿ) ಸ್ವಯಂವರ

ಡಿ) ನಿರಾಧಾರ

3.**“ಜೋಗಿ”** ಈ ಪದದ ತತ್ಸಮ ಪದ

ಎ) ಯೋಗಿ

ಬಿ) ಭೋಗಿ

ಸಿ) ತ್ಯಾಗಿ

ಡಿ) ರೋಗಿ

4. ‘**ಅಕ್ಟೋಬರ್ ೨ ರಂದು ಶಾಲೆಯಲ್ಲಿ ಗಾಂಧಿಜಯಂತಿಯನ್ನು ಆಚರಿಸಲಾಯಿತು**.’ ಈ ವಾಕ್ಯದಲ್ಲಿರುವ **“ಗಾಂಧಿಜಯಂತಿಯನ್ನು”** ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ

ಎ) ಪ್ರಥಮಾ ವಿಭಕ್ತಿ

ಬಿ) ದ್ವಿತೀಯ ವಿಭಕ್ತಿ

ಸಿ) ತೃತೀಯ ವಿಭಕ್ತಿ

ಡಿ) ಚತುರ್ಥಿ ವಿಭಕ್ತಿ

5. ಈ ಕೆಳಗಿನವುಗಳಲ್ಲಿ **ಸವರ್ಣಧೀರ್ಘ ಸಂಧಿಗೆ** ಉದಾಹರಣೆಯಾದ ಪದ

ಎ) ಹರಿಜನೋಧ್ಧಾರ

ಬಿ) ಏಕೈಕ

ಸಿ) ಸದಭಿರುಚಿ

ಡಿ) ಮಹಾತ್ಮ

6.**“ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ “**

ಎ) ಪೂರ್ಣ ವಿರಾಮ ಚಿಹ್ನೆ

ಬಿ) ಅರ್ಧ ವಿರಾಮ ಚಿಹ್ನೆ

ಸಿ) ಅಲ್ಪ ವಿರಾಮ ಚಿಹ್ನೆ

ಡಿ) ವಿವರಣಾತ್ಮಕ ಚಿಹ್ನೆ

7. **ಹಿಂದಿನ ಕಾಲದಲ್ಲಿ ರಾಜ ಮಹಾರಾಜರು ಕಪ್ಪಕಾಣಿಕೆಗಳನ್ನು ಪಡೆಯುತ್ತಿದ್ದರು**.ಈ ವಾಕ್ಯದಲ್ಲಿರುವ ‘**ಜೋಡುನುಡಿ**’ ಪದ.

ಎ) ಹಿಂದಿನ ಕಾಲ

ಬಿ) ಮಹಾರಾಜ

ಸಿ) ಕಪ್ಪಕಾಣಿಕೆ

ಡಿ) ಪಡೆಯುತ್ತಿದ್ದರು.

8. **“ಮುಕ್ಕಣ್ಣು”** ಪದವು ಈ ಸಮಾಸಕ್ಕೆ ಉದಾಹರಣೆಯಾದ ಪದವಾಗಿದೆ.

ಎ) ತತ್ಪುರುಷ ಸಮಾಸ

ಬಿ) ಕರ್ಮ ಧಾರಯ ಸಮಾಸ

ಸಿ) ದ್ವಿಗು ಸಮಾಸ

ಡಿ) ದ್ವಂದ್ವ ಸಮಾಸ

**II. ಕೆಳಗಿನವುಗಳಲ್ಲಿ  ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4X1=4**

9. ಶರೀಫರ ತಂದೆ: ಹಜರತ್ ಹಿಮಾಮ :: ತಾಯಿ :____________________

10. ಉಲ್ಲಾಳದ ರಾಣಿ :ಅಬ್ಬಕ್ಕ :: ಕಿತ್ತೂರಿನ ರಾಣಿ ____________________

11. ಹಳೆಯ ಕೊಳೆಯ : ಕಳೆವೆವು :: ನವವ ಶುಭವ: ____________________

12. ಕರ್ನಾಟಕ ವಂಗ ಆಂಧ್ರ : ಭಾರತೀಯರೊಂದೆ : : ಪೂರ್ವೋತ್ತರ ಪಡು ತೆಂಕಣ :
____________________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4X1=4**

13. ಭಾರತದಲ್ಲಿರುವ ಅಲೆಮಾರಿಗಳು ರಾತ್ರಿವೇಳೆಯಲ್ಲಿ ತಂಗಲು ಇರುವ ಸ್ಥಳಗಳಾವುವು?

14. ರೈತನು ಮಳೆಯನ್ನು ಏನೆಂದು ಕರೆದಿದ್ದಾನೆ ?

15. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು ?

16. ಕಂಬಳಿ ಹುಳುವಿನ ಆಸೆ ಏನು?

**IV ಈ ಕೆಳಗಿನ ಪ್ರಶ್ನೆಗಳಿಗೆ ಮೂರು/ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. .** **8X2=16**

17. ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗು ಪ್ರೇರಕವಾದ ವಿಚಾರಗಳು ಯಾವುವು ?

18. ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ

19. ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ವ್ಯಕ್ತಪಡಿಸಿ.

20. 'ಈಗಿನ ವಿದ್ಯಾರ್ಥಿಗಳು ಪುಣ್ಯವಂತರು' ಎಂದು ಬೀಚಿಯವರು ಹೇಳಲು ಕಾರಣವೇನು?

21. ಸಿ.ಪಿ. ಕೆ. ಯವರು "ಹಿರಿಬಾಳುಗಳ ಪಳೆಯುಳಿಕೆ" ಎಂದು ಯಾವುದನ್ನು ಕರೆದಿದ್ದಾರೆ. ಏಕೆ ?

22. ನಿಜವಾಗಿ ಪುರಂದರ ವಿಠಲನನ್ನು ಹೇಗೆ ಕಾಣಬಹುದು ಎಂದು ಪುರಂದರದಾಸರು ಹೇಳುತ್ತಾರೆ.?

23. ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಎಂದೆನಿಸುವ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ?

24. ಮಂತ್ರಿ ಮತ್ತು ರಾಜನಾಗಲು ಯಾವ ಗುಣಗಳನ್ನು ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಿರುವುದನ್ನು ನಿಮ್ಮ ಮಾತುಗಳಲ್ಲಿ ತಿಳಿಸಿ.

**V. ಈ ಕೆಳಗಿನ ವಾಕ್ಯ/ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ.** **2X3=6**

25. "ಭೂಮಿಗೆ ಕೊಡತೇನೀ ದೇಹಾ"

26. "ಬನ್ನಿರಣ್ಣ ಬನ್ನಿರೆಲ್ಲ ಬಣ್ಣದಣ್ಣ ತಮ್ಮರು"

**VI. ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **4X3=12**

27. ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳು ಯಾವುವು? ವಿವರಿಸಿ.

28. 'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು ' ಎಂಬ ಹೇಳಿಕೆಯನ್ನು ಹೇಗೆ ಸಮರ್ಥಿಸುವಿರಿ.

29. ಬಣ್ಣ ಬೇರೆಯಾದರು ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?

30. ಮಳೆದೇವರಲ್ಲಿ ಜನಪದ ರೈತನು ಮಾಡುವ ಪ್ರಾರ್ಥನೆ ಮೆಚ್ಚುವಂಥದ್ದು ಏಕೆ ? ವಿವರಿಸಿ.

**VII. ಕೆಳಗಿನ ಕವಿಗಳ /ಸಾಹಿತಿಗಳ ಜನ್ಮಸ್ಥಳ, ಕಾಲ, ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ** **2X3=6**

31. ಬೀchi

32. ಸಿ.ಪಿ.ಕೆ.

**VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರು ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1X3=3**

33. "ಹಾಸಿಗೆ ಇದ್ದಷ್ಟು ಕಾಲು ಚಾಚು."

**ಅಥವಾ**

"ಮಾಡಿದ್ದು ಉಣ್ಣೋ ಮಹಾರಾಯ"

**IX. ಈ ಕೆಳಗಿನ ಯಾವುದಾದರು ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1X4=4**

34. ಶಿವಾಜಿಯು ಮಲ್ಲಾಮ್ಮಾಜಿಯೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಅಥವಾ**

ಕೆಳದಿ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರ ಸೈನ್ಯವನ್ನು ಹೇಗೆ ಸೋಲಿಸಿದಳು ? ಎಂಬುದನ್ನು ವಿವರಿಸಿ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.**

**1X4=4**

35. ಕಳಬೇಡ ಕೊಲಬೇಡ----------------------------------------

-------------------------------------------------------------

-------------------------------------------------------------

--------------------------------------------------ಇದೇ ಬಹಿರಂಗ ಶುದ್ಧಿ

**ಅಥವಾ**

ದೇವಲೋಕ ,ಮರ್ತ್ಯಲೋಕ--------------------------

--------------------------------------------------

--------------------------------------------------

---------------------------------------- ನೀವೆ ಪ್ರಮಾಣು.

**XI. ಕೆಳಗಿನ ಗದ್ಯಭಾಗವನ್ನುಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1X4=4**

36. ಗುಣಗಳಲ್ಲಿ ಎರಡು ಬಗೆ.ಒಂದು **ದೈವೀ ಗುಣ** ,ಇನ್ನೊಂದು **ಅಸುರೀ ಗುಣ**.ಈ ಸಂಸಾರದ ಸಾಗರದಿಂದ ನಮ್ಮನ್ನು ಪಾರುಮಾಡಿ ಸುಖ ಸಾಗರದತ್ತ ಕರೆದು ಕೊಂಡು ಹೋಗುವ ಗುಣಗಳು ದೈವೀ ಗುಣಗಳು. ಅದಕ್ಕೆ ಬದಲಾಗಿ ನಮ್ಮನ್ನು ದುಃಖ ಕಡಲಲ್ಲಿ ಮುಳುಗಿಸಿ ಬಿಡುವ ಗುಣಗಳು ಅಸುರೀ ಗುಣಗಳು. ಓರ್ವ ವಿದೇಶಿ ಚಿಂತಕನು ಈ ಬಗ್ಗೆ ಒಳ್ಳೆಯ ಮಾತನ್ನು ಹೇಳುತ್ತಾನೆ."**ಸದ್ಗುಣವೇ ಆರೋಗ್ಯ. ದುರ್ಗುಣವೇ ಅನಾರೋಗ್ಯ ಹಾಗು ಭವಬಂಧನ, ಸದ್ಗುಣಗಳಿಂದ ದೈಹಿಕ ಮಾನಸಿಕ ಆರೋಗ್ಯ. ಹಾಗೂ ಜೀವನ್ಮುಕ್ತಿ ! ಅಂಥ ಗುಣ ಸಿರಿಯಲ್ಲಿ ತಪವೂ ಒಂದು"** .

ತಪದ ಸಾಮಾನ್ಯ ಅರ್ಥ ಸತತ ದುಡಿಮೆ ಹಾಗೂ ಆ ದುಡಿಮೆಯ ಕಷ್ಟವನ್ನು ಸಹಿಸುವುದು. ಮನುಷ್ಯನ ಕೈ –ಮೈ, ಮನ –ಮತಿಗಳೆಲ್ಲ ದುಡಿಯಬೇಕು. ಮನುಷ್ಯನು ಮಾನವತ್ವದಿಂದ ದೈವತ್ವಕ್ಕೆ ಏರುವುದು ಈ ದುಡಿಮೆಯಿಂದಲೇ!.**ಸಿಂಹಸನ್ಯಾಸಿ ವಿವೇಕಾನಂದರು** ಈ ದುಡಿಮೆಯ ಮಹಿಮೆ ಕುರಿತು ಒಂದು ಮಾತನ್ನು ಹೇಳುತ್ತಾರೆ."**ದುಃಖದ ಮಡುವಿನಲ್ಲಿ ಮುಳುಗಿರುವ ನನ್ನ ದೇಶ ಬಾಂಧವರು ಎಚ್ಚೆತ್ತು ಕರ್ಮಯೋಗದ ಚೈತನ್ಯದೊಂದಿಗೆ ತಮ್ಮ ಕಾಲಮೇಲೆ ತಾವು ನಿಲ್ಲುವಂತೆ ಆಗುವುದಾದರೆ ನಾನು ಸಾವಿರ ನರಕಗಳ ಕಷ್ಟವನ್ನು ಸಹಿಸಲು ಸಿದ್ಧ**"!

ಕಷ್ಟದ ಬೆಟ್ಟವನ್ನು ಏರಿ ಇಳಿದಾಗಲೇ ನಾವು ಸುಖದ ಸಾಗರ ತಲುಪುತ್ತೇವೆ.ದಿವ್ಯ ಜೀವನ ಸಾಗಿಸುತ್ತೇವೆ.ದೇವದರ್ಶನ ಪಡೆಯುತ್ತೇವೆ. ಅಂತೆಯೇ **ಕಾವ್ಯರ್ಷಿ ರವೀಂದ್ರರು** ಹೇಳುತ್ತಾರೆ. **"ಎಲ್ಲಿ ಕಲ್ಲು ಕುಟಿಕನು ಕಠಿಣ ಕಲ್ಲುಗಳನ್ನು ಕಟಿಯುತ್ತಿರುವನೋ, ಎಲ್ಲಿ ರಸ್ತೆಯ ರೂವಾರಿಯು ಸುಡುವ ಸೂರ್ಯನೊಂದಿಗೆ, ಸುರಿವ ಮಳೆಯೊಂದಿಗೆ ಬಿರುಸು ನೆಲವನು ಅಗೆಯುತಿಹನೋ ಅಲ್ಲಿ ಮತ್ತೆ ಅಲ್ಲಿಯೇ ದೇವನಿಹನು! ದುಡಿಮೆಯೇ ತಪಸ್ಸು**".

**ಪ್ರಶ್ನೆಗಳು**:

ಎ) ಗುಣಗಳ ಎರಡು ಬಗೆಗಳು ಯಾವುವು?

ಬಿ) ಮನುಷ್ಯ ಮಾನವತ್ವದಿಂದ ದೈವತ್ವಕ್ಕೆ ಏರುವುದು ಯಾವಾಗ?

ಸಿ) ಸಿಂಹಸನ್ಯಾಸಿ ವಿವೇಕಾನಂದರು ದುಡಿಮೆಯ ಮಹಿಮೆ ಕುರಿತು ಏನು ಹೇಳುತ್ತಾರೆ?

ಡಿ) ಕಾವ್ಯರ್ಷಿ ರವೀಂದ್ರರ ಪ್ರಕಾರ ದೇವನು ಎಲ್ಲಿ ಇಹನು ?

**XII. ಕೆಳಗೆ ಕೊಟ್ಟಿರುವ ಯಾವುದಾದರು ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ**

**1X4=4**

37. "ನಿಮ್ಮ ಶಾಲಾ ಪ್ರವಾಸ "

**ಅಥವಾ**

"ಅರಣ್ಯ ಸಂರಕ್ಷಣೆ "

**XIII. ಕೆಳಗಿನ ಯಾವುದಾದರು ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**.

**1X5=5**

38. ನಿಮ್ಮನ್ನು ಕಾರವಾರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ "ವಿರಾಟ್"ಎಂದು ಭಾವಿಸಿಕೊಂಡು ನಿಮ್ಮ ವ್ಯಾಸಂಗ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಮಳವಳ್ಳಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ "ವಿದ್ಯಾ" ಎಂದು ಭಾವಿಸಿಕೊಂಡು ನೀವು ಹೋಗಬೇಕೆಂದಿರುವ ಕರ್ನಾಟಕ ದರ್ಶನ ಪ್ರವಾಸಕ್ಕೆ 1000 ರುಪಾಯಿಗಳನ್ನು ಕಳುಹಿಸುವಂತೆ ಹೆಚ್.ಡಿ.ಕೋಟೆಯಲ್ಲಿರುವ "ರಮೇಶ್ "ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.

++++++++++++++++++++++++++++++++++++++++++++++++++++++++++++++++++++++++++++++++++